# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆ 773/2024

**ಸಾಕ್ಷಿಯನ್ನು ದಿಃ 24.12.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸಾಕಮ್ಮ | ಸಿ.ಡಬ್ಲ್ಯೂಃ1 | ಪಿ.ಡಬ್ಲ್ಯೂಃ 1 |
| ಗಂಡನ ಹೆಸರು | ಲೇಟ್ ಸಣ್ಣಯ್ಯ | | |
| ವಯಸ್ಸು | 55 ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ರಂಗನಾಥ ಬಡಾವಣೆ<br>ಕಲ್ಲುಣಿಕೆ | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಈಗ ನೋಡುತ್ತಿರುವ ದೂರನ್ನು ನಾನು ಆಸ್ಪತ್ರೆಯಲ್ಲಿದ್ದಾಗ ನಮ್ಮ ಕಡೆಯವರಿಂದ ಬರೆಸಿಕೊಟ್ಟಿರುತ್ತೇನೆ. ಇದೇ ಒಂದು ವರ್ಷದ ಹಿಂದೆ ಗಲಾಟೆಯಾದ ವಿಚಾರದ ಬಗ್ಗೆ ಈಗ ನನಗೆ ತೋರಿಸಿದ ದಾಖಲೆಯ ಮೇಲೆ ಹೆಬ್ಬಟ್ಟು ಹಾಕಿದ್ದೇನೆ. ಸದರಿ ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಸ್ವಾಮಿ ನೋಡಿರುತ್ತೇನೆ. ಆರೋಪಿತರು ನಮ್ಮ ಮನೆಯ ಮುಂದೆ ಬಂದು ಗಲಾಟೆ ಮಾಡಿರುತ್ತಾರೆ ಹಾಗಾಗಿ ಯಾಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಗ್ರಾಮದವರು ಕೇಳುತ್ತಾರೆ. ನಾನು ಯಾಕೆ ಗಾಲಟೆ ಮಾಡುತ್ತಿದ್ದೀರಾ ಯಜಮಾನರ ಹತ್ತಿರ ಸರಿ ಮಾಡಿಸಿಕೊಳ್ಳೋಣ ಎಂದು ತಿಳಿಸಿದೆ. ನಂತರ 1 ನೇ ಆರೋಪಿ ನನಗೆ ಎದೆಗೆ, ತೊಡೆಗೆ ಹೊಡೆದರು. ಹೊಡೆದ ನಂತರ ನಾನು ಜ್ಞಾನ ತಪ್ಪಿ ಬಿದ್ದೆ. ಆಗ ನಮ್ಮ ಹುಡುಗ ಚಂದ್ರ ನನ್ನನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗೆ ದಾಖಲುಪಡಿಸಿರುತ್ತಾರೆ. ನಮ್ಮ ಮನೆ ಹತ್ತಿರ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಚಾಸಾ 2 ವರರಿಗೆ ಬೈದರು.

ದೂರು ನೀಡಿದ 3 ತಿಂಗಳ ನಂತರ ಪೊಲೀಸರಿಗೆ ಸ್ಥಳವನ್ನು ನಾನ್ನೇ ತೋರಿಸಿರುತ್ತೇನೆ. ಆ ಸಮಯದಲ್ಲಿನನ್ನ ಜೊತೆ ಚಾಸಾ 5 ರವರು ಸ್ಥಳದಲ್ಲಿ ಹಾಜರಿದ್ದರು. ಅರ್ಧ ಗಂಟೆಗಳ ಕಾಲ ಪೊಲೀಸರು ಬಂದು ನೋಡಿ ಬರೆದುಕೊಂಡಿದ್ದು ನನ್ನ ಹೆಬ್ಬಟ್ಟು ಪಡೆದಿರುತ್ತಾರೆ. ಸಾಕ್ಷಿ ಗುರುತಿಸಿದ ದಾಖಲೆ ನಿಪಿ 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ಆರೋಪಿ 2 ಮತ್ತು 3 ರವರು ಗಲಾಟೆಯಾಗುವ ಸಮಯದಲ್ಲಿ ನನ್ನ ಮುಂದಲೆಯನ್ನು ಹಿಡಿದುಕೊಂಡಿದ್ದರು ಎಂದರೆ ಸರಿ. ಅವರು ನನ್ನನ್ನು ತಡೆದು ನಿಲ್ಲಿಸಿ ನನ್ನ ಮೈ ಕೈಗೆ ಹೊಡೆದು ಕೆಳಕ್ಕೆ ಬೀಳಿಸಿರುತ್ತಾರೆ ಎಂದರೆ ಸರಿ. ಪುನಃ ಪುನಃ ನಮ್ಮ ತಂಟೆಗೆ ಬಂದರೆ ಸಾಯಿಸುತ್ತೇವೆ ಎಂದು ಆರೋಪಿತರು ಹೇಳಿದ್ದರು ಎಂದರೆ ಕೊಲೆ ಮಾಡುತ್ತೇವೆ ಎಂದು ಹೇಳಿದ್ದರು. ನಾನು ದೂರು ನೀಡಿದ 3 ದಿನಗಳ ನಂತರ ಅಂದರೆ ದಿನಾಂಕ 06.12.2023 ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಸ್ಥಳಕ್ಕೆ ಬಂದ ಪೊಲೀಸರು ನಿಪಿ 2 ರ ಮಹಜರ್ ನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಾಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ನಾನು ಹೇಳಿದ ಚಾಸಾ 5 ಅಲ್ಲದೆ ಚಾಸಾ 6 ರವರು ಸಹ ಇದ್ದರು ಎಂದರೆ ಅವರು ಇರಲಿಲ್ಲ.

## ಪಾಟೀಸವಾಲುಃ ಆರೋಪಿ ಪರ ವಕೀಲರು

ಕಾಲಾವಕಾಶ ಕೋರಿದ್ದು ರೂ 200 ಖರ್ಚು ಸಹಿ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.